VIJAYAKUMAR KANNUR
Digitally signed by VIJAYAKUMAR KANNUR
Date: 2025.11.18 16:41:26 +0530



**<u>ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ</u>**

**<u>ಸಾಕ್ಷಿಗೆ ಇಂದು ದಿನಾಂಕ 18.11.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್ ಪಿ ವಿ ವಕೀಲರಿಂದ :</u>**

ನಾನು ಹಾಜರು ಪಡಿಸಿರುವ ನಿಪಿ 7 ಮತ್ತು 8 ರ ದಾಖಲೆಗಳು ನಾನು ಮತ್ತು ಪ್ರತಿವಾದಿಯರು ಕೂಡಿಯೇ ವಾಸವಾಗಿದ್ದ ಬಗ್ಗೆ ರುಜುವಾತುಪಡಿಸುವ ಸಲುವಾಗಿ ಹಾಜರು ಪಡಿಸಿರುವೆನು. ನಿಪಿ 9 ರ ದಾಖಲಾತಿಯು ಮನೆಯ ಆಸ್ತಿಗೆ ಸಂಬಂಧಪಟ್ಟಂತೆ ಮಾತ್ರ ಇರುವ ದಾಖಲಾತಿ ಎಂದರೆ ಸರಿ. ನಿಪಿ 8 ರ ದಾಖಲಾತಿ ಇತ್ತೀಚಿನ ಕುಟುಂಬದ ಆಹಾರ ಪಡಿಚರ ಚೀಟಿಯಾಗಿರುವುದಿಲ್ಲ ಎಂದರೆ ಸರಿ, ಆದರೆ 2020 ರ ವರೆಗೆ ನಾವು ಮತ್ತು ಕುಟುಂಬ ಸದಸ್ಯರು ಕೂಡಿ ವಾಸವಾಗಿದ್ದ ಬಗ್ಗೆ ಹಾಜರು ಪಡಿಸಿರುವೆನು. ನಿಪಿ 8 ದಾಖಲಾತಿಯು ಈಗ ರದ್ದು ಪಡಿಸಿರುವರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಪ್ರತಿವಾದಿಯು ನಮ್ಮ ಹೆಸರನ್ನು ಕಡಿಮೆ ಮಾಡಿ ತನ್ನ ಹೆಸರಿನಲ್ಲಿ ಇರುವ ಪ್ರತ್ಯೇಕ ಅಹಾರ ಕುಟುಂಬ ಪಡಿಚರ ಚೀಟಿಯನ್ನು ಮಾಡಿಸಿಕೊಂಡಿರುವನು. ನನ್ನ ಕುಟುಂಬದು ನಾನು ಹಾಗೂ ಪ್ರತಿವಾದಿಯ ಕುಟುಂಬದ್ದು ಪ್ರತಿವಾದಿ ಪ್ರತ್ಯೇಕವಾಗಿ ಆಹಾರ ಪಡಿಚರ ಚೀಟಿಗಳನ್ನು ಮಾಡಿಕೊಂಡಿರುವೆವು. ನಿಪಿ 7 ರ ದಾಖಾಲತಿಯ ಪ್ರಕಾರ ನಮ್ಮ ಗ್ರಾಮದ ಎಲ್ಲಾ ಮತದಾರರ ಪಟ್ಟಿಯಾಗಿರುವುದು ಎಂದರೆ ಸರಿಯಲ್ಲ. ಸಾಕ್ಷಿ ನುಡಿಯುವುದೇನೆಂದರೆ ತಮ್ಮ ಕುಟುಂಬ ಸದಸ್ಯರು ಕೂಡಿಯೇ ವಾಸವಾಗಿರುವುದಕ್ಕೆ ಸಂಬಂಧಪಟ್ಟಂತಹ ದಾಖಲಾತಿಯಾಗಿ ಎಂದು ಉತ್ತರಿಸುವರು.

2. ಉಪವಿಭಾಗಾಧಿಕಾರಿಗಳು ಜಮಖಂಡಿ ಇವರು ಹೆಚ್ಚುವರಿ ಜಮೀನು ಮಂಜೂರು ಮಾಡುವ ಸಮಯದಲ್ಲಿ ನಾನು ಅರ್ಜಿಯನ್ನು ಸಲ್ಲಿಸಿರುವುದಿಲ್ಲ, ಏಕೆಂದರೆ ಆಗ ನನಗೆ ಕೇವಲ 16 ವರ್ಷಗಳಾಗಿರುವುದರಿಂದ. ಈಗ ನನಗೆ ಸುಮಾರು 48 ವರ್ಷಗಳಾಗಿರಬಹುದು. 1998 ರಲ್ಲಿ ನನಗೆ 26-27 ವರ್ಷಗಳು ಆಗಿದ್ದವು ಅಂತ ಸೂಚಿಸುವುದು ಸರಿಯಲ್ಲ.

ಹೆಚ್ಚುವರಿ ಜಮೀನನ್ನು ಮಂಜೂರು ಮಾಡುವ ಸಲುವಾಗಿ 60 ಜನರು ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಆ ಸದಸ್ಯರಲ್ಲಿ ಕೇವಲ 29 ಜನರಿಗೆ ಜಮೀನು ಮಂಜೂರು ಮಾಡಿರುವರು ಎಂದರೆ ಸರಿ, ಅದರಲ್ಲಿ ನನ್ನ ಸಹೋದರನು ಇರುವನು ಎಂದರೆ ಸರಿ, ನನ್ನ ಸಹೋದರಿಗೆ ಜಮೀನು ಮಾಡುವ ಸಮಯದಲ್ಲಿ ನಾವೆಲ್ಲರೂ ಕೂಡಿಯೇ ವಾಸವಾಗಿದ್ದೇವು. ಈ ಕುಟುಂಬಕ್ಕೆ ಜಮೀನು ಮಂಜೂರು ಮಾಡುವ ಸಮಯದಲ್ಲಿ ಅರ್ಜಿ ದಾಖಲು ಮಾಡಲು ನಿಮಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಆಗ ತಾನು ಈ ಅರ್ಜಿ ಸಲ್ಲಿಸಲು 18 ವರ್ಷ ಪೂರ್ಣಗೊಂಡಿರಲಿಲ್ಲ ಎಂದು ಉತ್ತರಿಸುವರು. ಪ್ರತಿವಾದಿ 1 ಮತ್ತು ಉಳಿದ 28 ಜನ ಫಲಾನುಭವಿಗಳು ಕೂಡಿಕೊಂಡು ಕರ್ನಾಟಕ ಮೇಲ್ಮನವಿ ಬೆಂಗಳೂರು ಇವರಲ್ಲಿ ಅಪೀಲ ನಂ. 480/1996 ರ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಆಗ ಆ ಜಮೀನುಗಳು ವಹಿವಾಟುದಾರರಿಗೆ ವಹಿವಾಟಿಯ ಪ್ರಕಾರ ಜಮೀನುಗಳು ಮಂಜೂರು ಮಾಡುವುದಾಗಿ ತಹಶೀಲ್ದಾರ್ ಮುಧೋಳರವರು ಹೇಳಿರುವುದರಿಂದ ಆ ಕಾರಣಕ್ಕೆ ಮೇಲ್ಮನವಿ ಪ್ರಾಧಿಕಾರದಿಂದ ಮೇಲ್ಮನವಿಯನ್ನು ಹಿಂಪಡೆದುಕೊಂಡಿದ್ದು ಅದು ವಜಾಗೊಂಡಿರುವುದು ಎಂದರೆ ಸರಿ. ಪ್ರತಿವಾದಿ 1 ರವರು ಸರ್ವೇ ನಂಬರ್ 153 ಜಮೀನು ತನಗೆ ಮಂಜೂರಾಗಿದ್ದು ಹಾಗೂ ಸರ್ವೇ ನಂಬರ್ 154 ಜಮೀನು ತಾನು ಸಾಗುವಳಿ ಮಾಡುತ್ತಿದ್ದು ಆ ಜಮೀನನ್ನು ಸಹ ಮಂಜೂರು ಮಾಡುವಂತೆ ಅರ್ಜಿ ಸಲ್ಲಿಸಿರುವನು ಎಂದರೆ ಸರಿಯಲ್ಲ. ತಹಶೀಲ್ದಾರ ಮುಧೋಳ ಇವರ ಹೇಳಿಕೆಯನ್ನು ಪಡೆದು ನಂತರ ಸರ್ವೇ ನಂಬರ್ 154 ರ ಜಮೀನು ಸಹ ಮಂಜೂರು ಮಾಡಿರುವರು ಎಂದರೆ ಸಾಕ್ಷಿ ನುಡಿಯುವುದೇನೆಂದರೆ ಈ ಎರಡು ಜಮೀನುಗಳನ್ನು ಕೂಡಿಯೇ ಮಂಜೂರು ಮಾಡಿರುವುದಾಗಿ ಎಂದು ಉತ್ತರಿಸುವರು. ಈ ಜಮೀನುಗಳು ಹಕ್ಕು ಮಂಜೂರು ಮಾಡುವ ಸಮಯದಲ್ಲಿ ಪ್ರತಿವಾದಿ 1 ರವರೇ ಅರ್ಜಿ ಸಲ್ಲಿಸುವುದು ಮತ್ತು ಮನವಿಗಳನ್ನು ಸಲ್ಲಿಸುವುದು ಮಾಡಿದ್ದು, ಇವುಗಳಿಗೆ ಸಂಬಂದಪಟ್ಟಂತೆ ನನ್ನದು ಯಾವುದೇ ಪಾತ್ರ ಇರುವುದಿಲ್ಲ, ಸಂಪೂರ್ಣ ಪಾತ್ರ ಪ್ರತಿವಾದಿ 1 ರವರದೇ ಇರುವುದು ಎಂದರೆ ಸರಿಯಲ್ಲ. ಈಗ ನನಗೆ 48 ವರ್ಷಗಳು ಚಾಲ್ತಿಯಲ್ಲಿ ಇರುವವು. ಈ ಸಂಗತಿ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 8 ರ ದಾಖಲಾತಿ ನೈಜದಾಖಲಾತಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ರ ದಾಖಲಾತಿಯನ್ನು ಈ ಮೊದಲು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಈ ದಾಖಲಾತಿಯನ್ನು ಈ ದಾವೆಗೆ

ಅನುಕೂಲವಗುವ ಸಲುವಾಗಿ ಸೃಷ್ಟಿ ಮಾಡಿಕೊಂಡು ಬಂದು ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಈ ಆಸ್ತಿಗಳಿಗೆ ನನ್ನ ಸಹೋದರ ಸಂಪೂರ್ಣ ಮಾಲೀಕನು ಎಂದು ಗೊತ್ತಿದ್ದರು ಸಹಿತ ಈ ಸುಳ್ಳು ದಾವೆ ದಾಖಲು ಮಾಡಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು. )

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ

VIJAYAKUMAR KANNUR

Digitally signed by VIJAYAKUMAR KANNUR
Date: 2025.11.18 16:41:32 +0530